ಧಾರಾವಾಹಿ

# ಸ್ವಾಮಿ ವಿವೇಕಾನಂದರ ಮಾತೆಯರು

ಸ್ವರ್ಣಗೌರಿ

*(ಹಿಂದಿನ ಸಂಚಿಕೆಯಿಂದ)*

### ಭಗಿನಿ ನಿವೇದಿತಾ

ಲಂಡನ್ ನಗರದಲ್ಲಿ ತತ್ತ್ವಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ ಮುಂತಾದವುಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡುತ್ತಿದ್ದ ಮಿಸ್ ಮಾರ್ಗರೆಟ್ ನೊಬೆಲ್ ಎಂಬಾಕೆಗೆ ಆಧ್ಯಾತ್ಮಿಕ ಅತೃಪ್ತಿ ಆರಂಭವಾಯಿತು. ೧೮೯೫, ಸೆಪ್ಟಂಬರ್ ೧೦ ರಂದು ಸ್ವಾಮೀಜಿ ಲಂಡನ್ ನಗರವನ್ನು ಪ್ರವೇಶಿಸಿದರು. ಲೇಡಿ ಮಾರ್ಗ್‌ಸನ್ ಎಂಬುವವಳ ಆಮಂತ್ರಣದ ಮೇರೆಗೆ ಸ್ವಾಮೀಜಿಯ ಭಾಷಣ ಕೇಳಲು ಹೋದ ಮಾರ್ಗರೆಟ್ ಮುಂದೆ ಜೊಸೆಫಿನ್ ಮ್ಯಾಕ್ ಲೌಡಳಿಗೆ ಹೀಗೆಂದು ಬರೆಯುತ್ತಾಳೆ: "ಆ ಸಮಯದಲ್ಲಿ ಸ್ವಾಮೀಜಿ ಲಂಡನ್ನಿಗೆ ಬರದೆ ಇದ್ದಿದ್ದರೆ ಏನಾಗುತ್ತಿತ್ತೆಂಬುದನ್ನು ಯೋಚಿಸಿ ನೋಡು; ನನ್ನ ಜೀವನ ನಿರರ್ಥಕವಾಗುತ್ತಿತ್ತು. ಒಂದು ಸುಮುಹೂರ್ತವನ್ನು ನಾನು ನಿರೀಕ್ಷಿಸುತ್ತಿರುವುದಾಗಿ ನನಗೆ ಯಾವಾಗಲೂ ಅನ್ನಿಸುತ್ತಿತ್ತು. ಯಾವಾಗಲೂ ಹೇಳುತ್ತಿದ್ದೆ, ಆಹ್ವಾನ ಬರುವುದೆಂದು. ಆ ಆಹ್ವಾನ ಕೊನೆಗೂ ಬಂದಿತು."

ಸ್ವಾಮಿ ವಿವೇಕಾನಂದರು ಆಕೆಯನ್ನು ಸಾಧನೆಯ ಗರಡಿಯಲ್ಲಿ ತರಬೇತು ಮಾಡಿ, ಪರಿಶುದ್ಧಳನ್ನಾಗಿ ಮಾಡಿ ಭರತಖಂಡದ ಉದ್ಧಾರಕ್ಕೆ ನಿವೇದಿಸಿದರು. ಅವಳಿಗೆ ಬೇಲೂರು ಮಠದಲ್ಲಿ ಬ್ರಹ್ಮಚರ್ಯ ದೀಕ್ಷೆಯನ್ನು ಕೂಡ ನೀಡಿದರು. ಮಾರ್ಗರೆಟ್ ಅಂದಿನಿಂದ ನಿವೇದಿತೆಯಾದಳು. ಸ್ವಾಮೀಜಿ ಅವಳ ಬಗ್ಗೆ ಹೀಗೆನ್ನುತ್ತಾರೆ: "ಇಂಗ್ಲೆಂಡಿನಲ್ಲಿ ನಾನು ಮಾಡಿದ ಕೆಲಸಕ್ಕೆ ದೊರೆತ ಶ್ರೇಷ್ಠತಮ ಪುಷ್ಪವೇ ನಿವೇದಿತಾ." ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಒಂದು ಪತ್ರದಲ್ಲಿ ಸ್ವಾಮೀಜಿ, "ಮಿಸ್ ನೊಬೆಲ್ ನಿಜ ವಾಗಿಯೂ ನಮಗೆ ದೊರೆತ ಒಂದು ಅಮೂಲ್ಯ ಆಸ್ತಿ" ಎಂದಿದ್ದಾರೆ. ನಿವೇದಿತಾ ಇಲ್ಲದಿದ್ದರೆ ಸ್ವಾಮೀಜಿಯವರ ಕೆಲವು ಭವ್ಯ ಆಲೋಚನೆಗಳು ಜಗತ್ತಿಗೆ ದೊರಕುತ್ತಲೇ ಇರಲಿಲ್ಲ.

"ಸ್ವಾಮೀಜಿ,ತಮ್ಮ ದೇಶದ ಜನರ ಮೇಲೆ ಇದ್ದ ಪ್ರೀತಿಗೆ ದಾಸಳಾಗಲು ನಾನು ಇಚ್ಛಿಸಿದೆ. ಆದರೆ ನಾನು ಸೋತದ್ದು ಅವರ ಶೀಲಕ್ಕೆ. ನಾನಾದರೋ ಅವರ ಆಧ್ಯಾತ್ಮಿಕಪುತ್ರಿಯಾದೆ. ಇದೊಂದು ಅತ್ಯಾನಂದಕರವಾದ ಸಂಬಂಧವಾಗಿ ಪರಿಣಮಿಸಿತು." ಎಂದು ನಿವೇದಿತಾ ಸ್ವಾಮಿ ವಿವೇಕಾನಂದರ ಬಗ್ಗೆ ಬರೆಯುತ್ತಾಳೆ.

೧೮೯೭ ರ ಏಪ್ರಿಲ್ ೬ ಮತ್ತು ೨೪ ರ ದಿನಾಂಕಗಳಲ್ಲಿ ಬರೆದ ಪತ್ರಗಳಲ್ಲಿ ಸ್ವಾಮೀಜಿ, "ನಿನ್ನಂತಹ ಅನೇಕ ಮಹಿಳೆಯರು ಭಾರತದಲ್ಲಿ ಜನಿಸಲಿ ಮತ್ತು ದೇಶದ ಉನ್ನತಿಗಾಗಿ ತಮ್ಮ ಜೀವನವನ್ನು ಅರ್ಪಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ" ಎನ್ನುತ್ತಾರೆ.



೧೮೯೭, ಜುಲೈ ೨೯ ರ ಪತ್ರದಲ್ಲಿ, "ನಾನು ನಿನಗೆ ಪ್ರತಿಜ್ಞೆ ಮಾಡಿ ಹೇಳುತ್ತೇನೆ, ನೀನು ಭಾರತಕ್ಕಾಗಿ ಕೆಲಸ ಮಾಡಿದರೂ ಸರಿ, ಮಾಡದೇ ಇದ್ದರೂ ಸರಿ, ನೀನು ವೇದಾಂತವನ್ನು ತಿರಸ್ಕರಿಸಿದರೂ ಸರಿ, ಅದರಲ್ಲಿಯೆ ಉಳಿದರೂ ಸರಿ. ನಾನು ಮಾತ್ರ ಸಾಯುವವರೆಗೂ ನಿನ್ನ ಹಿಂದೆ ಇರುತ್ತೇನೆ. ಮನುಷ್ಯನ ಮಾತು ಮತ್ತು ಆನೆಯ ಕೊಂಬು ಹೊರಗೆ ಬರುವವೇ ಹೊರತು ಮತ್ತೆ ಒಳಗೆ ಹೋಗುವುದಿಲ್ಲ" ಎಂದು ಸ್ವಾಮೀಜಿ ಬರೆಯುತ್ತಾರೆ.

ನೆವಿನ್ಸನ್ ಎಂಬ ಪತ್ರಕರ್ತ ಹೀಗೆ ಬರೆಯುತ್ತಾರೆ: **"ದಿವ್ಯ ಭಾರತಮಾತೆಯ ಪ್ರೇಮದಾರಾಧನೆಗೆಂದು ಬಹುದೂರದಿಂದ ಅತಿ ಪ್ರಯಾಸದಿಂದ ಹುಡುಕಿ ತಂದ ಸುಗಂಧ ಕುಸುಮವೇ ನಿವೇದಿತಾ... ಆಕೆಯ ಹೆಸರೇ ಸೂಚಿಸುವಂತೆ ಅವಳು ತನ್ನದೆಲ್ಲವನ್ನೂ ಭಾರತಕ್ಕಾಗಿ ಅರ್ಪಿಸಿದ ಮಹಾನ್ ಚೇತನ."**

### ಮಿಸೆಸ್ ಸೇವಿಯರ್

ವಿವೇಕಾನಂದರು ಎರಡನೇ ಬಾರಿ ಇಂಗ್ಲೆಂಡಿಗೆ ಹೋದಾಗ ಲಂಡನ್‌ನಲ್ಲಿ ಸೇವಿಯರ್ ದಂಪತಿಗಳನ್ನು ಸಂದರ್ಶಿಸಿದರು. ಧರ್ಮಪಿಪಾಸುಗಳಾಗಿದ್ದ ದಂಪತಿಗಳಿಬ್ಬರೂ ತೀವ್ರವಾದ ಸತ್ಯಶೋಧನೆಯಲ್ಲಿ ಮುಳುಗಿದ್ದರು. ಅನೇಕ ಮತಧರ್ಮಗಳನ್ನು ಅನುಸರಿಸಿದರೂ ಅವರ ಆಧ್ಯಾತ್ಮಿಕ ದಾಹ ಇಂಗಿರಲಿಲ್ಲ. ಸ್ನೇಹಿತರೊಬ್ಬರಿಂದ ಸ್ವಾಮಿ ವಿವೇಕಾನಂದರ ಬಗ್ಗೆ ತಿಳಿದು ಅವರ ಮಾತುಗಳನ್ನು ಕೇಳಿದ ತಕ್ಷಣ, "ಆಹಾ! ನಾವು ಇಡೀ ಜನ್ಮ ವ್ಯರ್ಥವಾಗಿ ಯಾವುದಕ್ಕಾಗಿ ಅಲೆಯುತ್ತಿದ್ದೆವೋ ಅದು ಇಲ್ಲಿದೆ.